ಅಸಲ ದಾವಾ ಸಂಖ್ಯೆಃ 184/2020

ಡಿ.ಡ್ಲ್ಯೂ ನಂ.1

**ಸಾಕ್ಷಿಯನ್ನು ದಿನಾಂಕಃ 16.01.2025 ರಂದು ಪುನಃ ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಪಿ.ಎಂ.ವಿ, ಪ್ರತಿವಾದಿ ಪರ ವಕೀಲರಿಂದಃ**

ದಾವಾ ಆಸ್ತಿಗಳು ವಾದಿಯ ಹೆಸರಿನಲ್ಲಿ ದಾಖಲಿವೆ ಎಂದರೆ ಸಾಕ್ಷಿ ಖೊಟ್ಟಿ ರೀತಿಯಲ್ಲಿ ದಾಖಲಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಮೂಲತಃ ವಾದಿಯ ತಂದೆ ನಾಗಪ್ಪ ಖಿಲಾರಿ ಇವರ ಹೆಸರಲ್ಲಿ ಇದ್ದವು ಎಂದರೆ ಸರಿಯಲ್ಲ. ವಾದಿಯ ತಂದೆ ಮೃತನಾದ ನಂತರ ವಾದಿ ಮತ್ತು ಆತನ ಉಳಿದ ಮೂರು ಸಹೋದರರ ಮಧ್ಯ ಪಾಲುವಾಟ್ನಿ ಆಗಿ ಅದರಲ್ಲಿ ದಾವಾ ಆಸ್ತಿ ವಾದಿಯ ಹಿಸ್ಸಾಗೆ ಬಂದವು ಎಂದರೆ ಸರಿಯಲ್ಲ. ಸದರಿ ಪಾಲುವಾಟ್ನಿಯ ಆಧಾರದ ಮೇಲೆ ದಿಃ 07.02.1997 ರಲ್ಲಿ ದಾವಾ ಆಸ್ತಿಯ ದಾಖಲೆಗಳಲ್ಲಿ ವಾದಿಯ ಹೆಸರು ನಮೂದಿಸಲಾಯಿತು ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿ ವಾದಿಯ ಹೆಸರಲ್ಲಿ ಮತ್ತು ಅದಕ್ಕೂ ಮೊದಲು ಅವರ ತಂದೆಯ ಹೆಸರಲ್ಲಿ ಖೊಟ್ಟಿ ರೀತಿಯಾಗಿ ಮಾಡಿದ್ದಾರೆ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ ಎಂಬ ಪ್ರಶ್ನೆಗೆ, ಸಾಕ್ಷಿ ತನಗೆ ತಿಳಿಯದಂತೆ ತಮ್ಮ ಹೆಸರುಗಳನ್ನು ವಾದಿ ದಾಖಲಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳ ದಾಖಲೆಗಳಲ್ಲಿ ನನ್ನ ಹೆಸರು ಇತ್ತು. ದಾವಾ ಆಸ್ತಿಗಳ ದಾಖಲೆಗಳಲ್ಲಿ ನನ್ನ ಹೆಸರು ಕಡಿಮೆ ಮಾಡಿ ವಾದಿ ಮತ್ತು ಆತನ ತಂದೆಯ ಹೆಸರು ಯಾವ ಇಸವಿಯಲ್ಲಿ ದಾಖಲಿಸಿಕೊಂಡರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ನನ್ನ ಹೆಸರಿನಲ್ಲಿ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಮುಂದುವರಿದು ಸಾಕ್ಷಿ ಈಗಲೂ ಸಹ ದಾವಾ ಆಸ್ತಿಗಳ ದಾಖಲಗಳಲ್ಲಿ ತನ್ನ ಹೆಸರು ಇದೆ ಎಂದು ನುಡಿಯುತ್ತಾರೆ. ಆ ಕುರಿತು ಗ್ರಾಮ ಪಂಚಾಯತ ಉತಾರೆಯನ್ನು ಹಾಜರುಪಡಿಸುತ್ತೇನೆ.

ದಾವಾ ಆಸ್ತಿಗಳ ದಾಖಲೆಗಳಲ್ಲಿ ವಾದಿ ಮತ್ತು ಆತನ ತಂದೆಯ ಹೆಸರು ದಾಖಲಿರುವದನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿದ್ದೆ. ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯ ತೆರಿಗೆ ನಾನು ಭರಣಾ ಮಾಡಿದ್ದೇನೆ ಎಂದು ತೋರಿಸಲು ಕರ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ. ನಾವು ಪಿ ಡಿ ಓ ಇವರಿಗೆ ವಿನಾಕಾರಣ ಅರ್ಜಿ ನೀಡಿದ್ದು, ಅದಕ್ಕೆ ಅವರು ವಾದಿಗೆ ಪದೇ ಪದೇ ನೋಟಿಸು ನೀಡಿದ್ದು ನಾನು ವಾದಿಗೆ ತೊಂದರೆ ಕೊಡುತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಕಬ್ಜಾ ವಹಿವಾಟಿಗೆ ನಾನು ತೊಂದರೆ ಕೊಡುತ್ತಿದ್ದೇನೆ ಎಂದರೆ, ಸಾಕ್ಷಿ ಅದು ನನ್ನ ಜಾಗ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಯಾವ ವಾರ್ಡನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮಾಲೀಕ ನಾನೇ ಮತ್ತು ಅದರ ಕಬ್ಜಾ ವಹಿವಾಟಿಯಲ್ಲಿ ನಾನೇ ಇದ್ದೇನೆ ಎಂದು ತೋರಿಸಲು ಯಾವದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ಆಸ್ತಿಯ ಸುತ್ತಮುತ್ತ ನನ್ನ ಆಸ್ತಿಗಳು ಇವೆ. ಅವುಗಳ ನಂಬರ ನನಗೆ ಹೇಳಲು ಬರುವುದಿಲ್ಲ. ಈ ದಾವೆ ಚಾಲ್ತಿಯಲ್ಲಿರುವಾಗ ವಾದಿಯ ವಿರುದ್ಧ ಅಸಲು ದಾವಾ ನಂಃ239/2024 ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯ ಹೊರತಾಗಿ ನನ್ನ ಮತ್ತು ವಾದಿಯ ಮಧ್ಯ ಈ ದಾವಾ ಆಸ್ತಿಗೆ ಸಂಬಂಧಿಸಿದಂತೆ ಬೇರೆ ಯಾವದೇ ಪ್ರಕರಣಗಳು ಚಾಲ್ತಿ ಇರುವುದಿಲ್ಲ.

ದಾವಾ ಆಸ್ತಿಯ ಕಬ್ಜಾದಲ್ಲಿ ನಾನು ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನನಗೂ ಯಾವದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಯ ಕಬ್ಜಾ ವಹಿವಾಟಿ ತೊಂದರೆ ಮಾಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

-sd/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ಮುಧೋಳ.

ಸಾಕ್ಷಿಯ ಸಹಿ